


ಪ್ರಾಣಿ ದಯಾ ಸಂಘ 'ಪೇಟಾ' ದಯೆ ಈಗ ಭಾರತದ ಮೇಲೂ ಬಿದ್ದಿದೆ. ಮುಂಬೈನ ಚೌಕದಲ್ಲಿ ಲೆಟ್ಯೂಸ್ ಎಲೆಗಳು ಈ ಮಾನಿನಿಯ ಮಾನ ಮುಚ್ಚಿವೆ. ಸಂದೇಶ ಸಸ್ಯಾಹಾರಿಗಳಾಗಿ ಎಂದು. ಆದರೆ ಫ್ಯಾಷನ್‌ಪ್ರಿಯರಿಗೆ ಸಂದೇಶ ಹೋಗಿದ್ದು ಈ ಉಡುಪನ್ನು ಟೂ ಇನ್ ಒನ್ ಆಗಿ ಬಳಸಬಹುದಾ ಎಂದು.

ಅಮೆರಿಕದ ಛಾಯಾಗ್ರಾಹಕ ಟ್ಯುನಿಕ್ ಕ್ಯಾಮೆರಾ ಕಣ್ಣು ಈ ಬಾರಿ ಸಿಡ್ನಿಯ ಒಪೆರಾ ಹೌಸ್ ಮೇಲೆ ಬಿತ್ತು. ಅದರಲ್ಲೇನು ವಿಶೇಷ, ಕ್ಯಾಮೆರಾ ಇರುವುದೇ ಚಿತ್ರ ತೆಗೆಯಲಿಕ್ಕೆ ಅಂತೀರಾ? ಆದರೆ ಎಲ್ಲಾ ಸ್ಮಾರಕಗಳಿಗೂ ಜೀವಂತಿಕೆ ಬರುವುದು ಹುಟ್ಟುಡುಗೆಯಲ್ಲಿ ಪೋಸ್ ಕೊಟ್ಟ ಜನರಿಂದ ಎನ್ನುವ ಟ್ಯುನಿಕ್ ಈ ಬಾರಿ 5200 ಮಂದಿಯ ಮಾನ ಕ್ಯಾಮೆರಾದಲ್ಲಿ ತೆಗೆದಿದ್ದಾನೆ.



ರಷ್ಯಾದ ಚಿಂಪಾಂಜಿಯೊಂದು ದೇವದಾಸ್ ಆಗಲು ಹೋಗಿ ಈಗ ಮದ್ಯವ್ಯಸನಿಗಳ ಪುನರ್‌ವಸತಿ ಕೇಂದ್ರ ಸೇರಿಕೊಂಡಿದೆ. ಸರ್ಕಸ್‌ನಲ್ಲಿ ಮದ್ಯ, ಸಿಗರೇಟ್ ಚಟ ಹತ್ತಿಸಿಕೊಂಡಿದ್ದ ಇದು ಮೃಗಾಲಯ ಸೇರಿದರೂ ಅಡರುಗಾಲು ಹಾಕುವುದು ಬಿಡಲಿಲ್ಲವಂತೆ. ಝೂಂ ಬರಾಬರ್ ಝೂಂ ಶರಾಬಿಯ ಈ ಚಿಂಪಾಂಜಿ ಈಗ ಕೇಂದ್ರದ ಹುಲು ಮಾನವರ ಜೊತೆಯೂ ಬರಾಬರ್.

ಜರ್ಮನಿಯ ಮಾರ್‌ಬರ್ಗ್‌ನಲ್ಲಿ ಮರವನ್ನು ಗರಗಸದಿಂದ ಕತ್ತರಿಸುವ ವಿಶ್ವ ಚಾಂಪಿಯನ್‌ಶಿಪ್ ನಡೆಯಿತು. 10,000 ಮಂದಿ ಸ್ಪರ್ಧಾಳುಗಳು. ಯಾರು ಬೇಗ ಕತ್ತರಿಸುತ್ತಾರೋ ಅವರೇ ಚಾಂಪಿಯನ್. ನಮ್ಮ ಅರಣ್ಯಗಳಲ್ಲಿ ಕ್ಷಣಮಾತ್ರದಲ್ಲಿ ಮರಗಳನ್ನು ಕತ್ತರಿಸುವುದು ಮಾತ್ರವಲ್ಲ, ಮಂಗಮಾಯ ಮಾಡುವವರು ಭಾಗವಹಿಸಬಹುದಿತ್ತು.



ಜೈಲುವಾಸಿಯ ಮೇಲೆ ತನಿಖಾಧಿಕಾರಿಗೆ ಪ್ರೇಮಾಂಕುರವಾದರೆ ಏನಾಗುತ್ತದೆ? ತನಿಖಾಧಿಕಾರಿಯೇ ಜೈಲು ಸೇರಬೇಕಾಗುತ್ತದೆ. ರಷ್ಯಾದ ಮಹಿಳಾ ತನಿಖಾಧಿಕಾರಿ ಯಾನಾಗೆ ಕೈದಿ ಕೊಮ್‌ಸೋಮೊ ಮೇಲೆ ಮನಸ್ಸಾಗಿಬಿಟ್ಟಿತು. ಪ್ರೇಮಪತ್ರದ ಬದಲು ಜೈಲು ಬದಲಾವಣೆ ಪತ್ರ ಬರೆದು ತನ್ನ ಮನೆಗೇ ಕೈದಿಯನ್ನು ಹೈಜಾಕ್ ಮಾಡಿ ಪ್ರೇಮಬಂಧನದಲ್ಲಿಟ್ಟಳು. ಈಗ ಯಾನಾಗೆ ಎರಡು ವರ್ಷ ಜೈಲು. ಸೋಮೋಗೂ ಜೈಲು. ಅದೂ ಬೇರೆ ಬೇರೆ ಕೊಠಡಿಗಳಲ್ಲಿ.



ಅಮೆರಿಕದಲ್ಲಿ ವಿಶ್ವದ ಎಂಟನೇ ಅದ್ಭುತ ಸಂಭವಿಸಿದೆ. ಬಟ್ಟೆಯೆಂದರೆ ಅಲರ್ಜಿಯಿರುವ ಈ ಮಂದಿ ನ್ಯೂಜೆರ್ಸಿಯಲ್ಲಿ ಪುಟ್ಟ ಪುಟ್ಟ ಮಕ್ಕಳು ರಚಿಸಿದ ಈ ಮಂಜುಗಡ್ಡೆಯ ನಗ್ನ ಕಲಾಕೃತಿ ಕಂಡು ನಾಚಿಕೊಂಡರಂತೆ. ಅಷ್ಟೇ ಅಲ್ಲ, ದೇಶದ ಸಂಸ್ಕೃತಿಗೆ ಅಪಚಾರ ಎಂದು ಪೊಲೀಸರ ಬಳಿ ದೂರಿದರಂತೆ. ಆ ಮಕ್ಕಳ ತಾಯಿ ಬಟ್ಟೆ ಹೊದಿಸಿ ದೇಶದ ಇದ್ದಬದ್ದ ಅಲ್ಪ ಸಂಸ್ಕೃತಿ ರಕ್ಷಿಸಿದಳು.

ಆಸ್ಟ್ರೇಲಿಯ ಕಂಪೆನಿಯೊಂದು ಪುರುಷರಿಗಾಗಿ 'ಬನಾನಾ' ಒಳ ಉಡುಪನ್ನು ತಯಾರಿಸಿದೆಯಂತೆ. ಹತ್ತಿ ಜೊತೆ ಬಾಳೆನಾರನ್ನು ಸೇರಿಸಿ ಮಾಡಿದ ಉಡುಪುಗಳಿವು. ಆದರೆ ಅಲ್ಲಿ ಬಾಳೆ ಎಂದರೆ ಮಂಗನ ನೆನಪು ಕಾಡುತ್ತದಂತೆ. ಇನ್ನು ಈ ಬಾಳೆನಾರಿನ ಉಡುಪನ್ನು ತೊಟ್ಟವರು ಮಂಗನಂತೆ ಜಿಗಿದಾಡಹತ್ತಿದರೆ... ಈಗಲೂ ಏನು ಕಮ್ಮಿ ಇಲ್ಲ ಬಿಡಿ ಎಂದಿರುವ ಕಂಪೆನಿ ಶೇ. 27ರಷ್ಟು ಮಾತ್ರ ಮಂಗನ ಅಂಶ, ಅಲ್ಲ ಬಾಳೆ ಅಂಶವಿದೆ ಎಂದು ಸ್ಪಷ್ಟನೆ ನೀಡಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65